## 29. ರೈತರು, ವಲಸಿಗರು, ರಸ್ತೆ ಬದಿ ಕಾರ್ಮಿಕರಿಗೆ ಕೇಂದ್ರದ ಬಂಪರ್ ನೆರವಿನ ಘೋಷಣೆ

ಲಾಕ್‌ಡೌನ್ ಸಂಕಷ್ಟಕ್ಕೆ ಸಿಲುಕಿರುವ ಎಲ್ಲ ವರ್ಗದವರಿಗಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿರುವ ರೂ.20 ಲಕ್ಷ ಕೋಟಿ ಪ್ಯಾಕೇಜ್‌ನ ಎರಡನೇ ಚರಣದಲ್ಲಿ ರೈಲು, ವಲಸೆ ಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳು, ಮುದ್ರಾ ಫಲಾನುಭವಿಗಳು, ಬುಡಕಟ್ಟು ಜನರ ಕಲ್ಯಾಣ ಸೇರಿ ಒಟ್ಟು 9 ನೆರವಿನ ಘೋಷಣೆ ಹೊರಬಿದ್ದಿವೆ. ಕಾರ್ಮಿಕರ ಸಂಹಿತೆಯ ಮಸೂದೆಯನ್ನು ಒಳಗೊಂಡಿರುವ ಈ ಉಪಕ್ರಮಗಳನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ವಲಸೆ ಕಾರ್ಮಿಕರಿಗೆ ನರೇಗಾ ಯೋಜನೆಯ ಉದ್ಯೋಗಾವಕಾಶ, ಪಡಿತರ ವಿತರಣೆ ವಿಸ್ತರಣೆ, ರೈತರ ಕೈಯಲ್ಲಿ ಹಣ ಇರುವಂತೆ ಮಾಡಲು ಬೆಳೆ ಸಾಲದ ಕಂತು ಪಾವತಿಗೆ 3 ತಿಂಗಳ ವಿನಾಯಿತಿ, 25 ಲಕ್ಷ ಹೊಸ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ.30 ಸಾವಿರ ಕೋಟಿಯ ಕ್ರೆಡಿಟ್, ಮುದ್ರಾ ಯೋಜನೆ ಫಲಾನುಭವಿಗಳಿಗೆ ಬಡ್ಡಿ ಸಬ್ಸಿಡಿ, ರಸ್ತೆ ಬದಿ ವ್ಯಾಪಾರಿಗಳಿಗೂ ಬ್ಯಾಂಕ್‌ಗಳಿಂದ ಸಾಲ ಹಾಗೂ ಬುಡಕಟ್ಟು ಜನರಿಗೆ ಅವರು ಇರುವಲ್ಲಿಯೇ ಉದ್ಯೋಗಾವಕಾಶ ಕಲ್ಪಿಸುವ ಯೋಜನೆಗಳ ವಿವರವನ್ನು ಸಚಿವೆ ನೀಡಿದರು. 8 ಕೋಟಿ ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ಇಲ್ಲದಿದ್ದರೂ ರೂ.3,500 ಕೋಟಿ ವೆಚ್ಚದಲ್ಲಿ ಉಚಿತವಾಗಿ ಪಡಿತರ ವಿತರಣೆ, ವಲಸೆ ಕಾರ್ಮಿಕರಿಗೆ ಮನೆ ಬಾಡಿಗೆ ದರ ನಿಗದಿ ಮೊದಲಾದ ಕ್ರಮಗಳು ಅವರಿಗೆ ಹೆಚ್ಚಿನ ಭದ್ರತೆಯನ್ನು ನೀಡಲಿದೆ ಎಂದಿದ್ದಾರೆ. ಮುದ್ರಾ ಶಿಶು ಸಾಲ ಯೋಜನೆಗೆ ಬಡ್ಡಿ ರಿಯಾಯಿತಿ, ಬೀದಿ ಬದಿ ವ್ಯಾಪಾರಿಗಳಿಗೆ ರೂ.10 ಸಾವಿರದವರೆಗೆ ವಿಶೇಷ ಸಾಲ ಸೌಲಭ್ಯ ಒದಗಿಸಲು ರೂ.5 ಸಾವಿರ ಕೋಟಿ ಅನುದಾನ ನಿಗದಿಪಡಿಸಿರುವುದು ಬೀದಿ ಬದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಧ್ಯಮ, ಕೆಳ ಮಧ್ಯಮ ವರ್ಗದವರಿಗೆ ಗೃಹ ಸಾಲ ಸಬ್ಸಿಡಿ ಯೋಜನೆಗೆ ರೂ.70 ಸಾವಿರ ಕೋಟಿ ನೆರವು ಈ ವರ್ಗದ ಜನರ ಕನಸು ಸಾಕಾರಗೊಳಿಸಲು ನೆರವಾಗಲಿದೆ. ಸಣ್ಣ ಮತ್ತು ಮಧ್ಯಮ ರೈತರಿಗೆ ಬೆಳೆ ಕೊಯ್ಲು ಮತ್ತು ಕೊಯ್ಲೋತ್ತರ ನಿರ್ವಹಣೆಗೆ ರೈತ ನಿಧಿಗೆ ಹೆಚ್ಚುವರಿ ರೂ.30 ಸಾವಿರ ಕೋಟಿ ಸೇರ್ಪಡೆ ಕೂಡ ರೈತರ ಹಿತ ಕಾಪಾಡಲಿದೆ. ಸಣ್ಣ ರೈತರು, ಪಶುಪಾಲಕರು ಮತ್ತು ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಅಡಿ ರೂ. 2 ಲಕ್ಷ ಕೋಟಿ ಸಾಲ ಸೌಲಭ್ಯ ನೀಡುವ ಕ್ರಮಗಳು ಸಂಕಷ್ಟಕ್ಕೊಳಗಾದ ಈ ವಲಯಗಳ ಜನರಿಗೆ ಉಸಿರು ನೀಡಿದೆ ಎಂದು ಪ್ರಶಂಸಿಸಿದ್ದಾರೆ.

**ಕೊಡುಗೆಗಳು:–**

ಸಣ್ಣ ಕೃಷಿಕರು: 1. ನಬಾರ್ಡ್ ಮೂಲಕ ರೂ.30 ಸಾವಿರ ಕೋಟಿ ನೆರವು

2. ಬೆಳೆ ಸಾಲದ ಕಂತು ಪಾವತಿಗೆ 3 ತಿಂಗಳು ವಿನಾಯಿತಿ

ವಲಸೆ ಕಾರ್ಮಿಕರು:– 1. ಎರಡು ತಿಂಗಳು ಉಚಿತ ಪಡಿತರ ವಿತರಣೆ

2. ಕೈಗೆಟುಕುವ ದರದಲ್ಲಿ ಮನೆ ಬಾಡಿಗೆ ಸಮುಚ್ಚಯ ನಿರ್ಮಾಣ

ಆಧಾರ:ವಿಜಯವಾಣಿ, ದಿನಾಂಕ:15.05.2020